# ಪ್ರದರ್ಶನ ಕಲೆ ಗುಮ್ಮಟೆವಾದನ

**ಗೌರಮ್ಮ ಟಿ.***

**DOI: https://doi.org/10.5281/zenodo.22108087**

**ABSTRACT**

ಉತ್ತರ ಕನ್ನಡ ಜಿಲ್ಲೆಯ ವಿಶಿಷ್ಟ ವಾದ್ಯ ಗುಮ್ಮಟೆ, ಹಾಲಕ್ಕಿಗಳು, ಅಂಬಿಗರು, ಕೋಮಾರಪಂತರು, ಸಿದ್ದಿಗಳು, ಮಹಾಲೆಗಳು, ಕುಣಬಿಗಳು, ಮರಾಠಿಗರು ಹೀಗೆ ಅನೇಕ ಜನಾಂಗಗಳು ಗುಮ್ಮಟೆಯೊಂದಿಗೆ ಬದುಕಿವೆ. ಎಲ್ಲಾ ಆದಿಮಕಲೆಗಳಲ್ಲಿ ಕಂಡುಬರುವಂತೆ ಉತ್ತರ ಕನ್ನಡದಲ್ಲಿಯೂ ಸಹ ಮಣ್ಣು ಚರ್ಮದಿಂದಾದ ಗುಮ್ಮಟೆ ವಾದ್ಯವನ್ನು ಬಳಸುತ್ತಾರೆ ಆದರೆ ಇಲ್ಲಿಯ ವಿಶಿಷ್ಟ ಪ್ರಕೃತಿ ಪರಿಸರಕ್ಕೆ ಅನುಗುಣವಾಗಿ ಗುಮ್ಮಟೆಯ ಆಕಾರ ಹಾಗೂ ವಾದನಕ್ರಮದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಇದೇ ರೀತಿ ಪ್ರದರ್ಶನ ಕ್ರಮ ಹಾಗೂ ಉದ್ದೇಶಗಳಲ್ಲಿಯೂ ವ್ಯತ್ಯಾಸಗಳಿವೆ. ಹಾಲಕ್ಕಿಗಳಿಗೆ ಹಾಗೂ ಸಿದ್ದಿಗಳಿಗೆ ಈ ವಾದ್ಯ ಮನರಂಜನೆ ಉದ್ದೇಶದ ಪ್ರದರ್ಶನಕಲೆಯಾದರೆ, ಮಹಾಲೆ ಜನಾಂಗದವರಲ್ಲಿ ಈ ವಾದ್ಯ ಚೌತಿ ಹಬ್ಬದ ಆಚರಣೆಯ ಜೊತೆ ತಳುಕು ಹಾಕಿಕೊಂಡಿದೆ. ಹಾಲಕ್ಕಿಗಳಲ್ಲಿ ಗುಮಟೆ ಸ್ವತಂತ್ರವಾದ ಖಾರ್ವಿ, ಮಹಾಲೆ, ಸಿದ್ದಿ, ಮರಾಠಿ, ಜನಾಂಗಗಳಿಗೆ ಅದು ತಾಸಮಾರ್ (ತಾಸ್ಮಾರ್) ಎಂಬ ವಾದ್ಯದೊಂದಿಗೆ ಸೇರಿ ನುಡಿಗೊಳ್ಳಬೇಕಾದ ವಾದ್ಯ.

**KEYWORDS:** ಪ್ರದರ್ಶನ, ಹಾಲಕ್ಕಿ, ಪದ, ಹಾಡು.

* **ಡಾ. ಗೌರಮ್ಮ ಟಿ.,** ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ, ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ, ನಿಟ್ಟೆ ಡೀಮ್ಡ್ ಟು ಬಿ ಯೂನಿವರ್ಸಿಟಿ, ಯಲಹಂಕ, ಬೆಂಗಳೂರು.

ಗುಮ್ಮಟೆ ಎಂಬುದು ಈ ವಾದ್ಯವು ಹೊಮ್ಮಿಸುವ ಧ್ವನಿಯಿಂದಾಗಿ ನಿಷ್ಪತ್ತಿಗೊಂಡಿರಬೇಕು. ಈ ವಾದ್ಯದ ಚರ್ಮ ಕಟ್ಟಿದ ಭಾಗದಲ್ಲಿ ಎರಡು ಪ್ರದೇಶವನ್ನು ನಾವು ಗುರುತಿಸಬಹುದು. ಮಧ್ಯದ ಚರ್ಮ ಮತ್ತು ಅಂಚಿನ ಭಾಗವನ್ನು ಹಸ್ತದಿಂದ 'ತಾಡನ' ಮಾಡಿದರೆ 'ಗುಮ್' ಎಂಬ ನಾದ, ಅಂಚಿನಲ್ಲಿ ಹೊಡೆದರೆ 'ಟಕ್' ಎನ್ನುವ ನಾದ ಹೊರಬರುತ್ತದೆ. (ಈ ಹಂತದಲ್ಲಿ ಇನ್ನೊಂದು ಕಡೆಯಿಂದ ಬಾಯಿಯನ್ನು ಮುಚ್ಚಿ ತೆರೆಯುವ ಕಾರ್ಯವೂ ನಡೆದಿರುತ್ತದೆ). ಹೀಗೆ ಈ 'ಗುಂ' ಮತ್ತು 'ಟಕ್' ಎನ್ನುವ ನಾದಾದಿಂದಾಗಿ ಈ ವಾದ್ಯಕ್ಕೆ 'ಗುಮ್ಮಟೆ' ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಅಂದರೆ 'ಗುಮ್ಮಟೆ' ಎಂಬುದು ಅನುಕರಣವಾಚಕ ಪದವಾಗಿರಬಹುದು.

ಗುಮ್ಮಟೆ ವಾದನದ ಜೊತೆ ಬೇರೆ ಬೇರೆ ಬಗೆಯ ಹಾಡುಗಳನ್ನು ಹಾಡಲಾಗುತ್ತದೆ. ಗುಮ್ಮಟೆಯ ನಮನ, ಸ್ಥಳೀಯ ದೇವತೆಗಳ ಗುತ್ತುಗಳಿಗೆ ನಮನ ಹೀಗೆ ಎಲ್ಲರನ್ನೂ ವಂದಿಸಿ ಕಥಾನಕವನ್ನು ಹಾಡುತ್ತಾರೆ. ಹಿಂದೆಲ್ಲಾ ವಿರಾಮ ಕಾಲವನ್ನು ಆಧರಿಸಿ ವಾರಗಟ್ಟಲೆ ಗುಮ್ಮಟೆ ಕಥಾನಕಗಳು ಮುಂದುವರಿಯುತ್ತಿದ್ದವು. ಇತ್ತೀಚೆಗೆ ಭಜನೆ, ಲಾವಣಿ ಹೀಗೆ ಎಲ್ಲ ಬಗೆಯ ಪದ್ಯಗಳನ್ನೂ ಗುಮ್ಮಟೆ 'ಗತ್ತಿಗೆ' ಒಗ್ಗಿಸಲಾಗಿದೆ. ದಿನಕರ ದೇಸಾಯಿಯವರ ಸಾಹಿತ್ಯವೂ ಗುಮ್ಮಟೆ ಮೂಲಕ ಪ್ರಸಾರವಾದದ್ದಿದೆ. ಕೆಲವೊಮ್ಮೆ ಹಾಡಿಲ್ಲದ, ವಾದನ ಮಾತ್ರವಿರುವ, ವಿವಿಧ ವಿನ್ಯಾಸದಲ್ಲಿ ನಾಲ್ಕೈದು ಮಂದಿ ಬರೀ ಗುಮ್ಮಟೆ ಬಾರಿಸುವುದುಂಟು. ಅದನ್ನು 'ಹೊಡಿಗುಮ್ಮಟೆ' ಎನ್ನಲಾಗುತ್ತದೆ. ಪ್ರದರ್ಶನಗಳಲ್ಲಿ ಸಾಹಿತ್ಯ ಅದರ ಒಂದು ಅಂಗ.

ಗುಮ್ಮಟೆವಾದ್ಯ, ಹಾಡುಗಾರರಿಗೆ ಶೃತಿಯೂ ತಾಳವೂ ಆಗಿ ಒದಗಿ ಬರುತ್ತದೆ. ವಾದಕರೇ ಗಾಯಕರಾಗಿರುವದರಿಂದ ಶೃತಿ, ಲಯ ಒಂದೇ ಮೂಲದವಾಗಿರುತ್ತದೆ. ಹಾಗೆ ಅದಕ್ಕೆ ಒಗ್ಗುವ ಒಪ್ಪುವ ಸಾಹಿತ್ಯ ಬಳಕೆಯಾಗುತ್ತದೆ. ಅಲ್ಲದೇ ಹಬ್ಬ, ಪಾನಕ ಪೂಜೆ, ಹಗಣ, ಸುಗ್ಗಿ ಹೀಗೆ ಬೇರೆ ಬೇರೆ ಸಂದರ್ಭಗಳು ಸಾಹಿತ್ಯದ ಮೇಲೆ ಪರಿಣಾಮ ಬೀರುತ್ತದೆ. ದೀರ್ಘ ಕಥಾನಕಗಳನ್ನು ಹಾಡುವ ರೂಢಿ ಇಂದು ತಪ್ಪಿದ್ದರಿಂದ ಚಿಕ್ಕಚಿಕ್ಕ ಹಾಡುಗಳು ಬಳಕೆಯಾಗುತ್ತದೆ. ಅವರ ಬದುಕು, ಬವಣೆ, ನಂಬುಗೆ ಇವೆಲ್ಲ ಅವರ ಗುಮ್ಮಟೆ ಹಾಡುಗಳಾಗಿವೆ. ಒಂದು ಉದಾಹರಣೆಯನ್ನು ನೋಡಬಹುದು.

**"ಭತ್ತದ ಚೀಲ ಲೇವಿಗೋಯ್ತು ತಂಗಿ ತಂಗಿ**
**ಅನ್ನದ ಬಟ್ಲಕೆ ಕಂಟ್ರೋಲಾಯ್ತು ಅಣ್ಣ ಅಣ್ಣ**
**ಅಂಗಡಿ ಅಕ್ಕಿ ತುಟ್ಟಿ ಆಯ್ತು ತಂಗಿ ತಂಗಿ**
**ಬಡವರ ಗೋಳು ಬಾಳಟ್ಟಾಯ್ತು ಅಣ್ಣ ಅಣ್ಣ**
**ಅಯ್ಯೋ ಸಾಯುಕಾರು ಸವಲತ್ತಿಲ್ಲ ತಂಗಿ ತಂಗಿ**
**ಮಕ್ಳು ಮರಿಗೆ ಉಪಾಸಲ್ಲೊ ಅಣ್ಣ ಅಣ್ಣ**
**ಸಾವ್ಕಾರ ಮಕ್ಳೀಗ್ ಹೋಳ್ಗೆ ತುಪ್ಪ ತಂಗಿ ತಂಗಿ"**

### ಗುಮ್ಮಟೆ – ಪಾಂಗು

ಹಾಲಕ್ಕಿಗಳಲ್ಲಿ 'ಪಾಂಗು' ಎಂಬ ವಾದ್ಯವಿದೆ ಅದು ಚಿಕ್ಕ ಗುಮ್ಮಟೆ. ಗುಮ್ಮಟೆಗಳು ಆಕಾರಕ್ಕೆ ತಕ್ಕಂತೆ ಸ್ವರಗಳನ್ನು ಪಡೆಯುತ್ತದೆ. ದೊಡ್ಡ ಗುಮ್ಮಟೆ ಮಂದ್ರ ಮಧ್ಯ ಸಪ್ತಕಗಳ ಸ್ವರವನ್ನು ಹೊಂದಿದ್ದರೆ ಪಾಂಗು ತಾರಕ ಸ್ವರಪಡೆದಿರುತ್ತದೆ. ಸಾಂಪ್ರದಾಯಿಕ ಕಥಾದಾಯಿಕ ಕಥಾನಕಗಳು ತುಂಬ ದೀರ್ಘವಾಗಿರುವದರಿಂದ ಧ್ವನಿಯನ್ನು ತುಂಬ ಕಾಲದವರೆಗೂ ಕಾಯ್ದುಕೊಳ್ಳಬೇಕಾಗುತ್ತದೆ. ಆಗ ಮಂದ್ರ ಹಾಗೂ ವಾದ್ಯ ಸಪ್ತಕದಲ್ಲಿಯೇ ಹಾಡಬೇಕಾಗುತ್ತದೆ.

ಅದಕ್ಕೆ ದೊಡ್ಡ ಗುಮ್ಮಟೆ ನೆರವಾಗುತ್ತದೆ. ಗಣಪತಿ ಹಬ್ಬ, ಗದ್ದಲ ಸಡಗರದ ಉತ್ಸವಗಳಲ್ಲಿ ಹಾಡುವ ತುಂಡು ಪದಗಳಿಗೆ 'ಪಾಂಗು' ಸಹಕಾರಿ. ಅದರ ತಾರಕ ಶೃತಿ, ತಾರಕ ಸ್ವರದ ಹಾಡುಗಳಿಗೆ ಯೋಗ್ಯ ಹಿಮ್ಮೇಳ ಒದಗಿಸುತ್ತದೆ. ಮಧ್ಯ ಮತ್ತು ಮಂದ್ರದ ಸ್ವರಗಳ ಕೇಳುವಿಕೆಗೆ ಪ್ರೇಕ್ಷಕನಿಗೆ ತಾಳ್ಮೆ, ಸಮಾಧಾನ, ವಿರಾಮ ಅಗತ್ಯ. 'ಪಾಂಗಿನ' ತಾರಕ ಸ್ವರ ಗದ್ದಲದಲ್ಲೂ ಗಮನ ಸೆಳೆಯುವುದು.

**ಸಿದ್ದಿಯರ ಗುಮ್ಮಟೆ**

ಸಿದ್ದಿಯರ ಗುಮ್ಮಟೆ ಮಡಕೆಯಾಕಾರದ್ದೇ ಆದರೂ ತುಂಬು ದೊಡ್ಡದು. ಅದರ ನಾದ ಸಹ ದೊಡ್ಡದೇ. ಮನರಂಜನೆಯ ಮುಖ್ಯ ಸಾಧನವಾಗಿ ಗುಮ್ಮಟೆ ಅವರಲ್ಲಿ ಬಳಕೆಯಲ್ಲಿದೆ. ಸ್ಥಳೀಯವಾಗಿ ಮುಖ್ಯ ಪ್ರವಾಹದಲ್ಲಿರುವ ಜನಾಂಗವನ್ನು ಅನುಕರಿಸುವ ಸಿದ್ದಿಗಳು ಆ ಜನಾಂಗದಲ್ಲಿ ರೂಢಿಯಲ್ಲಿರುವ ಗುಮ್ಮಟೆ ಪದಗಳನ್ನೇ ತಾವೂ ಹಾಡುತ್ತಾರೆ. ಗುಮ್ಮಟೆಗೇ ನಿರ್ದಿಷ್ಟವಾದ ಸಾಹಿತ್ಯ ಸಿದ್ದಿಯರಲ್ಲಿಲ್ಲ. ಆದರೆ ಅವರ ಗುಮ್ಮಟೆಯ ನಾದ ಮಾತ್ರ ಮೈಲುದ್ದದವರೆಗೂ ಕೇಳುತ್ತದೆ.

**ಹಾಲಕ್ಕಿ ಮತ್ತು ಸಿದ್ದಿ ಗುಮ್ಮಟೆ**

ಇಲ್ಲಿ ನಾವು ಹಾಲಕ್ಕಿಗಳ, ಹೂಜೆಯಾಕಾರದ ಗುಮ್ಮಟೆ ಮತ್ತು ಸಿದ್ದಿಯರ ಕೊಡದಾಕಾರದ ಗುಮ್ಮಟೆಯ ಮೇಲೆ ಅವರ ಪರಿಸರ ಬೀರಿದ ಪ್ರಭಾವವನ್ನು ಗಮನಿಸಬಹುದು. ಹಾಲಕ್ಕಿಗಳ ಹೂಜೆಯಾಕಾರದ ಉದ್ದ ಗುಮ್ಮಟೆಯ ನಾದದ ಮೇಲೆ ಸಮುದ್ರದ 'ಘೋಷ'ದ ಪ್ರಭಾವವನ್ನೂ, ಸಿದ್ದಿಗಳ ಗುಮ್ಮಟೆಯ ಮೇಲೆ ಕಾಡಿನ ಪ್ರಭಾವವನ್ನೂ ಅದರ ನಾದದಿಂದಾಗಿ ಗುರುತಿಸಲು ಸಾಧ್ಯ. ಸಮುದ್ರದ ಅಲೆಗಳ ಏರಿಳಿತದ ನಾದದ ಪ್ರಭಾವ ಹಾಲಕ್ಕಿಗಳ ಗುಮ್ಮಟೆ ಹಾಡಿನಲ್ಲಿದೆ. ಪದದ ಸಾಲಿನ ಕೊನೆಯ ಸ್ವರಗಳನ್ನು ಏರಿಳಿಸುವ ರೀತಿ 'ಏ' ಮತ್ತು 'ಓ' ಸ್ವರವನ್ನು ಮಾರ್ಧನಿಸುತ್ತದೆ. ಸಾಗರದ ಅಲೆಗಳಲ್ಲಿ ಸಹ ಈ ಸ್ವರಗಳನ್ನು ಗಮನಿಸಬಹುದು. ಕಾಡಿನಲ್ಲಿಯ ಅಗತ್ಯ ಕೂಗುವಿಕೆ 'ಕುಹೂ' ಧ್ವನಿ, ಸಿದ್ದಿಯರ ಗುಮ್ಮಟೆಯಲ್ಲಿ ಸ್ಥಾಯಿ ಸ್ವರವಾಗಿರುವುದು ಆಕಸ್ಮಿಕವೇನಲ್ಲ.

**ಗುಮ್ಮಟೆಯ ಸಾಧ್ಯತೆಗಳು**

ಆಧುನಿಕ ವಾದ್ಯಗಳ ಬಳಕೆಯ ಚಿಂತನೆಯ ಹಿನ್ನೆಲೆಯಲ್ಲಿ ಗುಮ್ಮಟೆ ವಾದ್ಯವನ್ನು ಹೀಗೂ ನೋಡಲು ಸಾಧ್ಯ ಎಂಬ ಗ್ರಹಿಕೆಯಿಂದ ಈ ವಿಚಾರಗಳನ್ನು ಮಂಡಿಸುತ್ತಿದ್ದೇನೆ. 'ತಬಲಾ' ವಾದ್ಯದ ಪರಿಭಾಷೆಯಲ್ಲಿ ಹೇಳುವುದಾದರೆ ವಾದ್ಯದಲ್ಲಿ ಚಾಟಿ, ಮೈದಾನ, ಶಾಯಿ, ಎಂಬ ಭಾಗವಿದೆ. 'ಚಾಟಿ' ಅಂಚನ್ನು, 'ಮೈದಾನ' ಒಳಮೈಯನ್ನು ಸೂಚಿಸಿದರೆ, ಮಧ್ಯದಲ್ಲಿ ಇರುವ ಸ್ವಲ್ಪ ಉಬ್ಬಾದ ಭಾಗ 'ಶಾಯಿ' ಎಂದು ಕರೆಯಲ್ಪಡುತ್ತದೆ. ಗುಮ್ಮಟೆಯಲ್ಲೂ 'ಚಾಟಿ' ಮತ್ತು 'ಮೈದಾನ' ಎಂಬ ಎರಡು ಭಾಗಗಳನ್ನು ಗುರುತಿಸಬಹುದು. ಇವೆರಡೇ ಭಾಗವಿರುವದರಿಂದ ಹಸ್ತದಿಂದ ಅದನ್ನು ವಾದಿಸಲಾಗುತ್ತದೆ. ತಬಲದಲ್ಲೂ, ಮೃದಂಗದಲ್ಲೋ ಮಧ್ಯದ ಉಬ್ಬು ಭಾಗ (ಶಾಯಿ, ಬೋನ) ಇರುವದರಿಂದ ಹಸ್ತ ಮಾತ್ರವಲ್ಲದೇ ಬೆರಳುಗಳ ಹೊರಳಿಸುವಿಕೆ ಸಹ ಸಾಧ್ಯವಾಗುತ್ತದೆ. ಗುಮ್ಮಟೆ ಸಹ ಈ ಉಬ್ಬು ಭಾಗವನ್ನು ಪಡೆದಲ್ಲಿ ವಾದನದ ಸಾಧ್ಯತೆಗಳು ಹೆಚ್ಚುತ್ತವೆ. ಹೀಗೆ ಮಾಡಿದಾಕ್ಷಣ ಗುಮ್ಮಟೆಯನ್ನು ಇನ್ನೊಂದು ತಬಲಾವಾಗಿಸಿಯೋ, ಮೃದಂಗವಾಗಿಸಿಯೋ ಬಿಡುವುದಲ್ಲ. ಏಕೆಂದರೆ ಮೃದಂಗಕ್ಕೊ, ತಬಲಾಕ್ಕೋ ಇಲ್ಲದ ಒಂದು ಉತ್ತಮ ಸಾಧ್ಯತೆ ಈ ವಾದ್ಯಕ್ಕಿದೆ. ಅದೆಂದರೆ ವಾದ್ಯದ ಇನ್ನೊಂದೆಡೆ ತೆರವಾಗಿರುವದು. ಹಸ್ತಗಳ ಮುಚ್ಚುವಿಕೆ, ಅರೆ ಮುಚ್ಚುವಿಕೆ, ತೆರೆಯುವಿಕೆಯ

ಸಹಾಯದಿಂದ ಬೇರೆ ಬೇರೆ ಧ್ವನಿ ವಿನ್ಯಾಸಗಳನ್ನು ಬೆರಳುಗಳ ಹೊರಳಿಸುವಿಕೆಯಿಂದ ನಾದ ವಿನ್ಯಾಸದೊಡನೆ ಬಳಸಲು ಸಾಧ್ಯವೇ ಎಂಬುದನ್ನು ತಜ್ಞರು ಗಮನಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಕೇರಳದಲ್ಲಿ 'ನಂತುಣಿ' ಎಂಬ ವಾದ್ಯವಿದೆ. ಈ ವಾದ್ಯ 'ನಂ' ಎಂಬ ಪ್ರತಿಧ್ವನಿ ನೀಡುವದರಿಂದ 'ನಂತುಣಿ' ಎಂಬ ಹೆಸರು ಬಂದಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. (ಪಳುಕಲ್ ಗಂಗಾಧರನ್ ನಾಯರ್, (1998), ಕೇರಳ ಜಾನಪದ ಅಧ್ಯಯನ, ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.)
2. ನಾಯಕ ಎನ್. ಆರ್., (1993), ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ನಾಯಕ ಎನ್. ಆರ್., (1983), ಹೇಳತೇವೊ ಗುಮ್ಮೆ ಪದನಾಮ, ಹೊನ್ನಾವರ: ಜಾನಪದ ಪ್ರಕಾಶನ.

**ಪ್ರದರ್ಶನ ಪಠ್ಯ:**

1. ಹಾಲಕ್ಕಿ ಗುಮ್ಮಟೆ.
2. ಹೊನ್ನಾವರ ತಾಲೂಕಿನ ವಂದೂರು ಗ್ರಾಮದ ಹಾಲಕ್ಕಿಗಳ ಪ್ರದರ್ಶನ.
3. ಹೊನ್ನಾವರ ತಾಲೂಕಿನ ಅಗ್ರಹಾರ ಗ್ರಾಮದ ಹಾಲಕ್ಕಿಗಳ ಪ್ರದರ್ಶನ.
4. ಅಂಕೋಲಾ ತಾಲೂಕಿನ ಹಂದಿಗದ್ದೆ ಗ್ರಾಮದ ಹುಲಿದೇವತಾ ದೇವಸ್ಥಾನದ ಸಂಕ್ರಾಂತಿ ಸೇವೆಯ ಪ್ರದರ್ಶನ.
5. ಮರಾಠಿಗರ ಗುಮ್ಮಟೆ.
6. ಹೊನ್ನಾವರ ತಾಲೂಕಿನ ತೊಳಸಾಣಿ ಗ್ರಾಮದ ಮರಾಠಿಗರ ಪ್ರದರ್ಶನ.
7. ಸಿದ್ದಿ ಜನಾಂಗದ ಗುಮ್ಮಟೆ.
8. ಯಲ್ಲಾಪುರ ತಾಲೂಕಿನ ಬೀಗಾರ ಗ್ರಾಮದ ಸಿದ್ದಿಗಳ ಗುಮ್ಮಟೆ.